# ಹಬ್ಬಲಿ ಅವರ ರಸಬಳ್ಳಿ: ಹಡೆದವ್ವ

ಡಾ. ವಿದ್ಯಾಸಾಗರ ಬಾಬುರಾವ
ಕನ್ನಡ ಉಪನ್ಯಾಸಕರು,
ದಿಶಾ ಪಿ. ಯು ಕಾಲೇಜು, ಕಲಬುರಗಿ

ಜನಪದ ಸಾಹಿತ್ಯ ಜನಪದರ ನಾಲಿಗೆಯ ಮೇಲೆ ಜೀವಂತವಾಗಿರುವ ಮೌಖಿಕ ಸಾಹಿತ್ಯ. ಜನರ ಸಂಸ್ಕೃತಿಯ ಸಾರವನ್ನು ಒಳಗೊಂಡ ಪ್ರಮುಖ ಸಾಹಿತ್ಯವಾಗಿದೆ. ಜನರ ಸಂಸ್ಕೃತಿಯ ಅಂತರಾಳದಲ್ಲಿ ಅವುಗಳ ಬೇರುಗಳಿರುತ್ತವೆ. ಜನಪದ ಗೀತೆಗಳು ಜನಪದ ಸಾಹಿತ್ಯದ ಪ್ರಮುಖ ಪ್ರಕಾರವಾಗಿದೆ. ಇವುಗಳಲ್ಲಿ ತ್ರಿಪದಿಗೆ ಪ್ರಥಮ ಸ್ಥಾನವಿದೆ. ಮೂರು ಸಾಲುಗಳಿಂದ ಈ ಹಾಡುಗಬ್ಬ, ಬಹಳ ಅತ್ಯಂತ ಸರಳ, ಸುಂದರ ಪದ ಲಾಲಿತ್ಯದಿಂದ ಕೂಡಿದ ಪದ್ಯ ಸಾಹಿತ್ಯ ಇದಾಗಿದೆ. ಯಾವದೇ ಜನಪದ ಪ್ರಕಾರವಾಗಿರಲಿ, ತಮ್ಮ ಬದುಕಿನ ರೀತಿ-ನೀತಿ ಆದರ್ಶ ಸಂಸ್ಕೃತಿ ಇವೆಲ್ಲವುಗಳು ತನ್ನ ಒಡಲಲ್ಲಿ ಇಟ್ಟುಕೊಂಡಿಯೇ ರಚನೆಯಾಗಿರುತ್ತದೆ. ಈ ಕವಿತೆಯಲ್ಲಿ ತಾಯಿಯ ಕುರಿತು ಹಲವಾರು ಗುಣಗಳನ್ನು ಚತ್ರಿಸಲಾಗಿದೆ. ತಾಯಿಗೆ ಜನಪದ ಸಾಹಿತ್ಯದಲ್ಲಿ ಪ್ರಮುಖವಾದ ಸ್ಥಾನವನ್ನು ನೀಡಲಾಗಿದೆ. ತಾಯಿ ಕುರಿತು ಹಲವಾರು ಜನಪದ ಹಾಡುಗಳು ದೊರಕುತ್ತವೆ. ಅಂತಹ ಒಂದು ಜನಪದ ಹಾಡು 'ಹಬ್ಬಲಿ ಅವರ ರಸಬಳ್ಳಿ' ಎಂಬ ಪದ್ಯದಲ್ಲಿ ಮೂಡಿ ಬಂದಿದೆ. ಈ ಪದ್ಯದಲ್ಲಿ ಬಂದಿರುವ ತಾಯಿಯ ಸ್ವರೂಪವನ್ನು ಈ ಲೇಖನದಲ್ಲಿ ಹಿಡಿದಿಡುವ ಪ್ರಯತ್ನ ಮಾಡಲಾಗಿದೆ.

ಬ್ಯಾಸಗಿ ದಿವಸಕ್ಕೆ ಬೇವಿನ ಮರ ತಂಪ
ಭೀಮರತಿಯೆಂಬ ಹೊಳಿ ತಂಪ | ಹಡೆದಮ್ಮ |
ನೀ ತಂಪ ನನ್ನ ತವರೀಗಿ ||

ಈ ತ್ರಿಪದಿಯ ಸಾಲುಗಳು ತಾಯಿಯ ಮಹತ್ವನ್ನು ಹೇಳುತ್ತವೆ. ತಾಯಿ ಇಲ್ಲದ ಮನೆಯ ನೆಮ್ಮದಿಯಿಂದ ಪ್ರೀತಿಯಿಂದ ಇರುವುದು ಕಷ್ಟ. ಹಾಗಾಗಿ ತಾಯಿ ಇರುವುದು ಬಹಳ ಅವಶ್ಯ ಎಂಬುದು ಈ ಸಾಲುಗಳ ಆಶಯವಾಗಿದೆ.

ಮದುವೆಯಾದ ಹೆಣ್ಣು ಮಗಳು ತಾಯಿಯ ಮತ್ತು ತವರನ್ನು ನೆನಪು ಮಾಡಿಕೊಳ್ಳುವ ಪರಿಯು ತಾಯಿಯ ಪ್ರೀತಿಯನ್ನು ಸಿಗದೇ ಇರುವುದು ಅವಳಿಗೆ ತಾಯಿಯೇ ಮೇಲೆ ಇನ್ನೂ ಭಾವನಾತ್ಮಕತೆಯ ಮಾತುಗಳು ಬರುವುದು ಸಹಜವಾದೆ. ಇಂತಹ ತಾಯಿಯ ಪ್ರೀತಿಯು ಮಕ್ಕಳಿಗೆ ಬಹಳ ಮಹತ್ವದಾಗಿದೆ ಎಂಬುದನ್ನು ತ್ರಿಪದಿಯ ಸಾಲುಗಳಿಂದ ಸ್ಪಷ್ಟವಾಗುತ್ತದೆ.

ಕಣ್ಣೆಂಜಲ ಕಾಡೀಗಿ ಬಾಯೆಂಜಲ ವಿಳ್ಯಾವ |
ಯಾರೆಂಜಲುಂಡು ನನಮನವ | ಹಡೆದೌವ್ವ |
ಬಾಯೆಂಜಲುಂಡು ಬೆಳೆದೇನ ||

ಇದು ಕೂಡ ತಾಯಿಯೇ ಇನ್ನೊಂದು ರೀತಿಯ ಮಹತ್ವನ್ನು ಹೇಳುತ್ತದೆ. ಕಣ್ಣಿಗೆ ಹಚ್ಚುವ ಕಾಡಿಗೆಯ ಎಂಜಲವು ನೆನಪನ್ನು ಮಗಳು ಮಾಡಿಕೊಳ್ಳುತ್ತಿರುವ ಈ ಸಂದರ್ಭ ಅವಳ ಪ್ರೀತಿ ಮತ್ತು ಆರೈಕೆಯನ್ನು ನೆನಪು ಮಾಡಿಕೊಳ್ಳುವುದೆ ಆಗಿದೆ. ಇಲ್ಲಿ ಬಾಯೆಂಜಲ ವಿಳ್ಯಾವ ಇದು ಇವತ್ತಿನ ದಿನಗಳಲ್ಲಿ ನಗರದ ಸಂದರ್ಭದಲ್ಲಿ ನಮಗೆ ಹೊಸದಾಗಿರುವಂತೆ ಕಂಡರೂ, ಹಳ್ಳಿಯ ಬಹುತೇಕ ಬಡತನದಲ್ಲಿರುವ ಜನರು ಅದರಲ್ಲಿ ತಳಸಮುದಾಯದ ಜನರಲ್ಲಿ ಇಂದಿಗೂ 'ಗೂಟಿ ಹಾಕುವ' ಪದ್ಧತಿ ರೂಢಿಯಲ್ಲಿದೆ. ಇದು ತಾಯಿಯು ವಿಳ್ಯಾದೆಲೆಯ ಜೊತೆಗೆ ಇನ್ನಿತರ ವಸ್ತುಗಳನ್ನು

ಎಲೆಯಲ್ಲಿ ಹಾಕಿ ಚೆನ್ನಾಗಿ ಬಾಯಿಯಲ್ಲಿ ಅಗೆದು, ಅಗೆದಿರುವುದನ್ನು ತನ್ನ ಎದೆಹಾಲನ್ನು ಒಂದು ಸಿಂಪಿಯಲ್ಲಿ ಕಾಸಿ ಅದರೊಳಗೆ ತಾಯಿಯು ಮೆಲ್ದಿರುವ ವೀಳ್ಯಾವು ಹಾಕಿ ಅದರ ರಸವನ್ನು ಮಗುವಿಗೆ ಕೂಡಿಸುವುದು ಹಿಂದಿನಿಂದಲೂ ಜನಪದರ ಜೀವನದಲ್ಲಿ ನಡೆದುಕೊಂಡು ಬರುತ್ತಿರುವುದನ್ನು ಇಲ್ಲಿ ಜನಪದರು ತಾಯಿಯ ಕುರಿತ ಮಹತ್ವ ಹೇಳುವ ಸಂದರ್ಭದಲ್ಲಿ ನೆನಪಿಸಿಕೊಂಡಿರುವುದು ಅವರ ಕಂಡುಂಡ ಅನುಭವ ಆಗಿದೆ. ಇದು ಕಾಲನಂತರದಲ್ಲಿ ಕಡಿಮೆಯಾಗುತ್ತ ಸಾಗಿದರೂ ಬಹುತೇಕ ಕಡೆ ಕಾಣಸಿಗುತ್ತದೆ. ಅದು ಒಂದು ಬಹಳ ದೊಡ್ಡ ಔಷಧಿ ಗುಣವನ್ನು ಹೊಂದಿದೆ. ಇದು ಜನಪದರ ವೈದ್ಯಲೋಕದ ತಿಳುವಳಿಕೆಯಾಗಿದೆ.

ಇದನ್ನು ತಾಯಿಯ ಸಂದರ್ಭದಲ್ಲಿ ಮಗಳು ನೆನಪು ಮಾಡಿಕೊಳ್ಳುವುದು ಈ ತ್ರಿಪದಿಯಲ್ಲಿ ತಂದಿದ್ದಾರೆ.

ಪ್ರಮುಖವಾಗಿ ಯಾರೆಂಜಲುಂಡ ನನಮನವ ತಾಯಿ ಮತ್ತು ಮಗಳ ನಡುವಿನ ಕರಳುಬಳ್ಳಿಯ ಸಂಬಂಧ ನೆನಪು ಮತ್ತು ತಾಯಿಯ ಕಡೆ ಎಳೆಯುವ ಜೀವ ಇವೆಲ್ಲವು ತಾಯಿಯ ಮಹತ್ವನ್ನು ಹೇಳುತ್ತವೆ. ಹೀಗೆ ತಾಯಿಯು ಮಕ್ಕಳ ಮೇಲೆ ಬೀರುವ ಪ್ರಭಾವ ಅವಳ ಕಾಳಜಿಯನ್ನು ತ್ರಿಪದಿಯ ಸಾಲುಗಳು ಸ್ಪಷ್ಟಪಡಿಸುತ್ತವೆ. ತಾಯಿಯನ್ನು ತಾಯಿಯು ಮಕ್ಕಳ ಸಂದರ್ಭದಲ್ಲಿ ಮಾಡಿರುವ ಆರೈಕೆಯನ್ನು ಯಾರು ಕೂಡ ಸಾಧ್ಯವಿಲ್ಲವೆಂಬುದನ್ನು ಮೇಲಿನ ಸಾಲುಗಳಿಂದ ತಿಳಿಯುತ್ತದೆ.

ಯಾರು ಇದ್ದರು ನನ್ನ ತಾಯವ್ವನ್ಹೋಲರ ।

ಸಾವಿರಕೊಳ್ಳಿ ಒಲಿಯಾಗ । ಇದ್ದರೆ ।

ಜ್ಯೋತಿ ನಿನ್ನಾಂ್ಯರ ಹೋಲ್ಯಾರ ॥

ತಾಯಿ ನೀಡುವ ಪ್ರೀತಿ ಮಮತೆಗೆ ಸರಿಸಮಾನವಾದದ್ದು ಯಾವುದಿಲ್ಲ ಎಂಬುದನ್ನು ಹೇಳುವುದೇ ಆಗಿದೆ. ಸಾವಿರಕೊಳ್ಳಿ ಒಲಿಯಾಗ ಇದ್ದರೂ ಕೂಡ ಜ್ಯೋತಿಯ ರೀತಿ ಬೆಳಕನ್ನು ನೀಡಲು ಸಾಧ್ಯವಿಲ್ಲವೋ ಹಾಗೆ ತವರ ಮನೆಯಲ್ಲಿ ಎಷ್ಟೇ ಜನರಿದ್ದರೂ ಕೂಡ ತಾಯಿಯ ಸ್ಥಾನವನ್ನು ತುಂಬಲು ಸಾಧ್ಯವಿಲ್ಲವೆಂಬ ಮಾತುಗಳು ತವರು ಮನೆಯನ್ನು ಬಿಟ್ಟು ಗಂಡನ ಮನೆಗೆ ಹೋದ ಹೆಣ್ಣು ಮಗಳ ಅನುಭವದ ಮಾತು ಆಗಿದೆ. ಅನುಭವ ಯಾವಗಲೂ ವಾಸ್ತವವಾಗಿರುತ್ತದೆ, ಎಂಬುದರಲ್ಲಿ ಅನುಮಾನವಿಲ್ಲ. ಹಾಗಾಗಿ ಈ ಸಾಲುಗಳು ತಾಯಿಯ ವಾಸ್ತವ ಸ್ಥಿತಿಯನ್ನು ಹೇಳುತ್ತವೆ.

ಹೆಣ್ಣು ಮಕ್ಕಳ ದು:ಖ ಹೆತ್ತವ್ವ ಬಲ್ಲಳು ।

ಹುತ್ತದ ಒಳಗಿರೋ ಸರುಪನ । ಬೇಗೆಯ ।

ನೆತ್ತಿಯ ಮೇಲಿರುವ ಶಿವಬಲ್ಲ ॥

ಹುತ್ತದ ಅನುಭವ ಅದರಲ್ಲಿ ಜೀವಿಸುವ ಸರ್ಪಕ್ಕೆ ಮಾತ್ರ ಗೊತ್ತಿರುತ್ತದೆ. ಇಲ್ಲಿ 'ಬೇಗೆಯ' ಎನ್ನುವುದರ ಅರ್ಥವೇ ಸರ್ಪದ ಕಷ್ಟ, ನೋವು, ದು:ಖ, ತೊಂದರೆಯಾಗಿದೆ. ಇದನ್ನು ಹೇಳುವುದರ ಉದ್ದೇಶ ಜನಪದರು ಹೆಣ್ಣು ಮಗಳ ಕಷ್ಟ, ನೋವು, ದು:ಖ, ತೊಂದರೆ, ಸಂಕಟ ಇವೆಲ್ಲವುಗಳನ್ನು ಅರ್ಥಮಾಡಿಕೊಳ್ಳಲು ತಾಯಿಗೆ ಮಾತ್ರ ಸಾಧ್ಯವೆಂಬುದನ್ನು ಹೇಳುತ್ತಾರೆ.

ಇಲ್ಲಿ ತಾಯಿಯೂ ಹೆಣ್ಣು ಮತ್ತು ಹೆತ್ತ ಹೊತ್ತ ಕರುಳು ಆಗಿರುವುದರಿಂದ ಸಹಜವಾಗಿ ಹೆಣ್ಣಿನ ಸಂಕಟಗಳನ್ನು ಅವಳ ಮನಸ್ಸಿನ ತಲ್ಲಣಗಳನ್ನು ತಿಳಿದುಕೊಳ್ಳಲು ಸಾಧ್ಯವೆಂಬುದನ್ನು ಮನೋವಿಶ್ಲೇಷಣೆ ನೆಲೆಯಲ್ಲಿ ಈ ಸಾಲುಗಳು ಹೇಳುತ್ತವೆ. ಇವತ್ತಿಗೂ ಜನಪದರ ನಾಲಿಗೆ ಮೇಲೆ ಹರಿದಾಡುವ 'ಹೆತ್ತವಳಿಗೆ ಗೊತ್ತು ಹೆರಿಗೆ ನೋವು' ಎನ್ನುವ ಮಾತನ್ನು ಪುಷ್ಟಿಕರಿಸಿದಂತೆ ಈ ಸಾಲುಗಳು ಕಂಡುಬರುತ್ತವೆ. ಇವೆಲ್ಲವುಗಳು ಅನುಭವದ ಹಿನ್ನೆಲೆಯಿಂದಲೇ ಬಂದಿರುವುದರಿAದ ಕಾಲಾತೀತ ಮತ್ತು ಸೀಮಾತೀತವಾಗಿ ವಾಸ್ತವತೆಯನ್ನು ಹೊಂದಿರುತ್ತವೆ.

ತಾಯೌವ್ವ ನೆನೆಯೂದು ಯಾಯಾಳಿ ಯಾಹೊತ್ತ।

ಊರೆಲ್ಲ ಉಂಡು ಮಲಗಾನ । ಬೆಳ್ಳಿಚಿಕ್ಕಿ ।

ಹೊಂಡಾಗ, ಹಡೆದವ್ವ ನೆನೆದೇನ ॥

ಈ ಸಾಲುಗಳು ತಾಯಿಯನ್ನು ಸ್ಮರಣೆ ಮಾಡಿಕೊಳ್ಳುವಂತಹ ಸಮಯ ಹೇಳುವುದು ಒಂದಡೆಯಾದರೆ, ತಾಯಿಯನ್ನು ನೆನಪಿಸಿಕೊಳ್ಳದಿರುವ ಸಮಯವಿಲ್ಲವೆಂಬುದನ್ನು ಹೇಳುತ್ತವೆ. ತಾಯಿಯ ನೆನಪು ತಾಯಿಯ ಮಕ್ಕಳ ಸಲುವಾಗಿಯೇ ಇಡೀ ತನ್ನ ಬದುಕನ್ನು ಸವೆಸಿರುವ ಅವಳ ತ್ಯಾಗವನ್ನು ಈ ನೆನಪು ಅನ್ನುವುದರ ಮೂಲಕ ಹೇಳಲಾಗುತ್ತಿದೆ.

ತಾಯವ್ವ ಬೈಬ್ಯಾಡ ತಿಳಿಗೇಡಿ ನನ್ನ ತಮ್ಮ।

ಬಾಳದಿನದಕಿ ಹಡೆದವ್ವನ । ಬೈದರ ।

ಭಾಳ ಮರುಗ್ಯಾಳ ಮನದಾಗ ॥

ಈ ಸಾಲುಗಳಲ್ಲಿ ತವರನ್ನು ಬಿಟ್ಟು ಹೋದ ಹೆಣ್ಣುಮಗಳು ತನ್ನ ತಮ್ಮನಿಗೆ ತಿಳಿವಳಿಕೆಯನ್ನು ಹೇಳುವುದಾಗಿದೆ.

ಹೆಣ್ಣು ಮಗಳು ತವರಿಗೆ ಬಂದಾಗ ತಾಯಿಯು ಗಂಡು ಮಕ್ಕಳ ಬಗ್ಗೆ ಕೆಲವು ಅಸಮಾಧಾನಗಳು ವ್ಯಕ್ತಪಡಿಸುವುದು ಸಹಜ ಅದು ಕೂಡ ಅವರ ಮೇಲೆ ಇಟ್ಟ ನಿರೀಕ್ಷೆಯಾಗಿರುತ್ತದೆ. ಅದು ಸಹಜವಾಗಿ ನೇರವೇರದೇ ಇರುವಾಗ ಹೇಳುವುದೆ ಆಗಿದೆ. ಇದರ ಹಿಂದೆಯೂ ಕೂಡ ತಾಯಿಯ ಪ್ರೀತಿ ಅಡಗಿಕೊಂಡಿರುತ್ತದೆ ಎಂಬುದನ್ನು ಮರೆಯುವಂತಿಲ್ಲ, ಇಂತಹ ವಿಷಯ ಬಂದಾಗ ತವರಿಗೆ ಬಂದ ಹೆಣ್ಣು ಮಗಳು ತಮ್ಮನಿಗೆ ಹಾಗೂ ಅಣ್ಣನಿಗೆ ತಿಳಿವು ಹೇಳುವ ವರ್ತಮಾನದ ವಾಸ್ತವತೆಯನ್ನು ಜನಪದರ ಈ ಸಾಲುಗಳು ಅನುಭವದ ನೆಲೆಯಲ್ಲಿ ತಾಯಿಯ ಕುರಿತು ಹೇಳುವುದಾಗಿದೆ. ಇಲ್ಲಿ ಪ್ರಮುಖವಾಗಿ ಗಂಡು ಮಕ್ಕಳು ತಾಯಿಯನ್ನು ಪ್ರೀತಿಸುವುದಿಲ್ಲ ಎಂಬಂತಹ ಭಾವವಿಲ್ಲ. ಸಹಜವಾಗಿ ಗಂಡುಮಕ್ಕಳು ತಾಯಿಯನ್ನು ನೊಡಿಕೊಳ್ಳುವ ಜವಬ್ದಾರಿಯನ್ನು ಹೊತ್ತಿಕೊಂಡಿರುವುದರಿಂದ ಇವರು ಒಂದೆ ಕಡೆಗೆ ಬದುಕು ಮಾಡಬೇಕಾಗುತ್ತದೆ. ಇಂತಹ ಸಂದರ್ಭಗಳಲ್ಲಿ ಸಹಜವಾಗಿಯೆ ಬೇಜಾರಗಳು ಮುನಿಸಗಳು ಇದ್ದಿರುವಂತವೇ ಇಳಿವಯಸ್ಸಿನವರಾದ ತಂದೆ ತಾಯಿ ಮನಸ್ಸು ಸೂಕ್ಷ್ಮವಾಗುತ್ತದೆ. ಚಿಕ್ಕ ಪುಟ್ಟ ವಿಷಯಗಳಿಗೂ ಬೇಜಾರ ಆಗುವ ಸಾಧ್ಯತೆಗಳೇ ಹೆಚ್ಚು. ವಯಸ್ಸಿನ ಕಾರಣ ಅವರಿಗೆ ಅಭದ್ರತೆಯ ಭಯ ಇಂತಹ ಘಟನೆಗಳಿಗೆ ಕಾರಣವಾಗುತ್ತವೆ. ಇಂತಹ ಸಂದರ್ಭದಲ್ಲಿ ತಾಯಿಯ ಎದುಗಡೆ ಅಣ್ಣ ತಮ್ಮರನ್ನು ಗದರಿ ತಾಯಿಗೆ ಸಮಧಾನ ಪಡಿಸುವುದು ಸಹಜವಾಗಿ ನಡೆವಂತಹದ್ದು ಇದನ್ನು ಜನಪದರು ಅನುಭವದ ನೆಲೆಯಲ್ಲಿ ಕಟ್ಟಿಕೊಟ್ಟಿದ್ದಾರೆ.

ತಾಯಿಲ್ಲದ ತವರೀಗಿ ಹೋಗದಿರು ನನ ಮನವ

ನೀರಿಲ್ಲದ ಕೆರಿಗೆ ಕರು ಬಂದು । ತಿರುಗಾಗ ।

ಆಗ ನೋಡುವರ ದು:ಖಗಳ ||

ತಾಯಿಯ ಮಮತೆ ಮತ್ತು ಪ್ರೀತಿಯನ್ನು ಹೆಣ್ಣುಮಗಳಿಗೆ ತಾಯಿ ಇಲ್ಲದ ಹೋದರೆ ಸಿಗದಿರುವುದನ್ನು ಹೆಣ್ಣು ಮಗಳು ತನ್ನ ಅನುಭವದ ಹಿನ್ನೆಲೆಯಲ್ಲಿ ಹೇಳುತ್ತಿರುವುದು ಒಂದಡೆಯಾದರೆ ತಾಯಿ ಮಹತ್ವನ್ನು ಹೇಳುವುದು ಇನ್ನೊಂದಡೆ. ತಾಯಿಯ ಮಗಳ ಮಧ್ಯವಿರುವ ಸಂಬಂಧ ಮತ್ತೊಂದೆಡೆಯಾಗಿದೆ. ಹೀಗೆ ತಾಯಿ ಕುರಿತು ಜನಪದರಲ್ಲಿ ಇರುವ ಭಾವವನ್ನು ಹೇಳುತ್ತದೆ. ಈ ಭಾವಗಳ ಬಳ್ಳಿಯ ದೀರ್ಘವಾದ ನೆನಪುಗಳು ಹೇಳುತ್ತಲೇ ತಾಯಿಯ ಸ್ಥಾನವನ್ನು ತುಂಬಲು ಅನ್ಯರಿಂದ ಸಾಧ್ಯವಿಲ್ಲವೆಂಬುದನ್ನು ಹೇಳಲಾಗಿದೆ.

ಉಂಗೂರ ಉಡದಾರ ಮುರಿದರ ಮಾಡಿಸಬಹುದು |
ಮಡದಿ ಸತ್ತರ ತರಬಹುದು | ಹಡೆದಂಥ |
ತಂದಿ ತಾಯೆಲ್ಲಿ ಸಿಕ್ಕಾರ ||

ತಂದೆ ತಾಯಿ ಮಹತ್ವವನ್ನು ಹೇಳುವ ಸಾಲುಗಳಾಗಿವೆ. ಇಲ್ಲಿ ಮಡದಿ ಸತ್ತರೆ ತರಬಹುದು ಎಂಬುದರ ಅರ್ಥ ಮಡದಿಯ ಮೇಲೆ ಕಾಳಜಿ ಪ್ರೀತಿ ಇಲ್ಲವೆಂಬ ಭಾವವಿಲ್ಲ, ತಾಯಿ-ತಂದೆಯ ಮಹತ್ವವನ್ನು ಹೇಳಲು ಉತ್ಪ್ರೇಕ್ಷವಾಗಿ ಹೇಳಿರುವುದಾಗಿದೆ. ಇದರ ಒಟ್ಟು ಆಶಯ ತಂದೆ-ತಾಯಿಯನ್ನು ಬದುಕಿರುವ ಸಂದರ್ಭದಲ್ಲಿ ಚನ್ನಾಗಿ ನೊಡಕೊಳ್ಳಬೇಕು. ಅವರ ಖುಷಿಯಲ್ಲಿ ನಾವು ಖುಷಿ ಕಾಣುವ ಗುಣವನ್ನು ಬೆಳಿಸಿಕೊಳ್ಳುವುದು ಸರಿಯಾದ ಮಕ್ಕಳ ಬದುಕಿನ ಕ್ರಮವೆನ್ನುವುದು ಜನಪದರ ಅನುಭವದ ತಿಳುವಳಿಕೆ ಆಗಿದೆ.

ಹಲವರು ತಂದೆ ತಾಯಿಯನ್ನು ಕಳೆದುಕೊಂಡ ಸಂದರ್ಭದಲ್ಲಿ ಅವರ ಮಹತ್ವ ಕುರಿತು ಕೊರಗುವ ಪ್ರಸಂಗಗಳು ಕಂಡುಬರುತ್ತವೆ. ಮಿಂಚಿಹೋದ ಕಾಲ ಚಿಂತಿಸಿ ಫಲವಿಲ್ಲ, ಹಾಗಾಗಿ ಅವರು ಇರುವಾಗಲೇ ಅವರ ಸೇವೆ ಮಾಡುವ ಮೂಲಕ ತಮ್ಮ ಬದುಕನ್ನು ಸ್ವಾರ್ಥಕವಾಗಿಸಿಕೊಳ್ಳುವುದು ಉತ್ತಮ ಬದುಕಿನ ಪಥವೆಂಬುದು ಜನಪದರ ನೈತಿಕ ಮೌಲ್ಯವು ಮೇಲಿನ ಸಾಲುಗಳು ಸ್ಪಷ್ಟಪಡಿಸುತ್ತವೆ. ಹೀಗೆ ಇಡೀ ಜನಪದ ಗೀತೆ ಅನುಭದ ಹಿನ್ನಲೆಯಲ್ಲಿ ವಾಸ್ತವ ಬದುಕು ಮತ್ತು ಹೊಸ ಪೀಳಿಗೆಗಳಿಗೆ ಆದರ್ಶ ಮತ್ತು ನೈತಿಕ ಮೌಲ್ಯಗಳನ್ನು ಹೇಳುತ್ತಲೇ ಸಾಗುತ್ತದೆ.

**ಸಂದರ್ಭ ಗ್ರಂಥಗಳು:**

೧) ಸಂ. ಹಲಸಂಗಿ ಗೆಳೆಯರು, ಗರತಿಯ ಹಾಡು ತ್ರಿಪದಿಗಳ ಸಂಗ್ರಹ, ಕನ್ನಡ ಸಾಹಿತ್ಯ ಪರಿಷತ್ತು ಬೆಂಗಳೂರು.

೨) ಸಂ. ಶಾಂತದೇವಿ ಇಮ್ರಾಪುರ, ಜಾನಪದ ತ್ರಿಪದಿಗಳು.

೩) ತ್ರಿಪದಿ ರಗಳೆ ಮತ್ತು ಜಾನಪದ ಸಾಹಿತ್ಯ - ಸಂ. ಪ್ರೊ. ಕಾಳೇಗೌಡ ನಾಗವಾರ - ಸಪ್ನ ಪ್ರಕಾಶನ, ಬೆಂಗಳೂರು ೨೦೨೧